**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 26.02.2026**

**ಪಾಟೀಸವಾಲುಃ 1ನೇ ಎದುರುದಾರ ಪರ ಶ್ರೀ ಎನ್ ಎ ಪಿ ವಕೀಲರಿಂದಃ** .

ಸ.ನಂ.216/15/2 ನ್ನು ನನ್ನ ತಂದೆಕ್ರಯಕ್ಕೆ ಪಡೆದದ್ದು ಎಂದರೆ ಸಾಕ್ಷಿಯು ನನ್ನ ತಾತ ಎನ್ನುತ್ತಾರೆ. ಸ.ನಂ.216/16ನ್ನು ಸಿದ್ದಬಸಪ್ಪ ಎಂಬುವವರು ಕ್ರಯಕ್ಕೆ ಕೊಂಡಿದ್ದು ಎಂದರೆ ಸುಳ್ಳು. ಸಾಕ್ಷಿಯು ಅದೂ ಅಜ್ಜನ ಆಸ್ತಿಯೇ ಎನ್ನುತ್ತಾರೆ. ಸಿದ್ದಬಸಪ್ಪ ನನ್ನ ದೊಡ್ಡಪ್ಪ. ನನ್ನ ತಂದೆಗೂ ದೊಡ್ಡಪ್ಪನಿಗೂ ಯಾವಾಗ ಹಿಸ್ಸೆಯಾಗಿದ್ದು ಎಂದರೆ ನಾನು ಚಿಕ್ಕವನಿದ್ದೆ ಎನ್ನುತ್ತಾರೆ. ಆಗ ನನಗೆ ಎಷ್ಟು ವರ್ಷ ಎಂದು ಹೇಳಲಾಗುವುದಿಲ್ಲ. ನನಗೆ ಈಗ 52 ವರ್ಷ ವಯಸ್ಸು. 1970ಕ್ಕಿಂತ ಹಿಂದೆಯೇ ನನ್ನ ತಂದೆ ಮತ್ತು ದೊಡ್ಡಪ್ಪನ ನಡುವೆ ಹಿಸ್ಸೆಯಾದದ್ದು ಎಂದರೆ ನನಗೆ ಗೊತ್ತಿಲ್ಲ.

2.ಸ.ನಂ.216/16 ನನ್ನ ತಂದೆ ಮತ್ತು ದೊಡ್ಡಪ್ಪನ ನಡುವೆ ಹಿಸ್ಸೆಯಾದಾಗ ನನ್ನ ತಂದೆಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಅದು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ. ಅದನ್ನು ನ್ಯಾಯಾಲಯದಲ್ಲಿ ಡಿಕ್ರಿ ಮಾಡಿ ಕೊಟ್ಟಿರುವುದು ಎಂದರೆ ಸರಿಯಲ್ಲ. ಹಾಸನದ 5ನೇ ಸಿವಿಲ್ ನ್ಯಾಯಾಲಯದಲ್ಲಿ ಹಾಕಿರುವ ಮೇಲ್ಮನವಿ ಇನ್ನೂ ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ.216/15 ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಆಗುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಹಿಸ್ಸೆ ಮಾಡಿಕೊಟ್ಟಿರುವುದರಿಂದ 5ನೇ 2ಭಾಗ 1ನೇ ಎದುರುದಾರರಿಗೆ ಹೋಗಬೇಕು ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದೆ ಕರೆದುಕೊಂಡು ಹೋಗಿ ಮಾಡಿಸಿರುತ್ತಾರೆ ಎನ್ನುತ್ತಾರೆ. ನನ್ನ ತಂದೆ ನ್ಯಾಯಾಲಯದಲ್ಲಿ ಒಪ್ಪಿ ಬರೆದುಕೊಟ್ಟಿರುವುದು ಎಂದರೆ ನನಗೆ ಗೊತ್ತಿಲ್ಲ ಅದು ಸುಳ್ಳು.

3.2011ರಲ್ಲಿ ನಮ್ಮ ಕುಟುಂಬದಲ್ಲಿ ಹಿಸ್ಸೆಯಾಗಿತ್ತು ಎಂದರೆ ಸರಿಯಲ್ಲ. ಪೂರ್ತ ಪರಿಹಾರದ ಹಣ ಪಡೆಯುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(4 ಮತ್ತು 5ನೇ ಎದುರುದಾರರ ಪರ ವಕೀಲರು ಗೈರುಹಾಜರಿರುವುದರಿಂದ ಪಾಟೀಸವಾಲು ಇಲ್ಲವೆಂದು ಪರಿಗಣಿಸಲಾಗಿದೆ)

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**